## ಒಬ್ಬರೇ ಬಂದ್ರಾ?

ಲಸಿಕೆ ಚುಚ್ಚಿಸಿಕೊಳ್ಳಲು ಹತ್ತಿರದ ಆಸ್ಪತ್ರೆಗೆ ಹೋಗಿದ್ದೆ. ಇಂಜೆಕ್ಷನ್ ಚುಚ್ಚುವ ಮುನ್ನ ನರ್ಸ್, 'ಒಬ್ಬರೇ ಬಂದ್ರಾ ಸಾರ್?' ಅಂತ ಎರಡು ಬಾರಿ ಕೇಳಿದರು. 'ಹೌದು, ಯಾಕೆ? ಜೊತೆಗೆ ಯಾರಾದರೂ ಬೇಕು ಎನ್ನುವ ಅಗತ್ಯವೇನಾದರೂ ಇದೆಯೇ?' ಎಂದೆ. ಆಕೆ, 'ಅಲ್ಲ ಸಾರ್, ಲಸಿಕೆ ಚುಚ್ಚೋವಾಗ ಫೋಟೊ ತೆಗೆಯೋಕೆ ಯಾರೂ ಜೊತೆಯಲ್ಲಿ ಬಂದಿಲ್ಲವೇ ಅಂತ ಕೇಳಿದೆ' ಎಂದರು. 'ಇಲ್ಲ' ಎಂದೆ. ಮುಂದುವರೆದು, 'ಬೇಕಿದ್ರೆ ನಿಮ್ಮ ಮೊಬೈಲ್ ಕೊಡಿ ಸಾರ್, ನಮ್ಮ ನರ್ಸ್ ಫೋಟೊ ತೆಗೀತಾರೆ... ವಾಟ್ಸ್ಆ್ಯಪ್, ಫೇಸ್‌ಬುಕ್‌ನಲ್ಲಿ ಹಾಕಕ್ಕೆ ಬೇಕಲ್ವಾ?' ಎಂದಾಗ ನಗೆಯುಕ್ಕಿತು.

**ರಾಜೀವ್ ಎನ್. ಮಾಗಲ್**





## ಚೌಕಾಸಿ ಅಜ್ಜಿ

ಮಧ್ಯಮವರ್ಗದವರಾದ ನಾವು ಎಲ್ಲದರಲ್ಲೂ ಚೌಕಾಸಿ ಮಾಡುವುದು ಸಾಮಾನ್ಯ. ನನ್ನ ಮಗಳು ಅಮೆರಿಕದಿಂದ ಬಂದಿದ್ದಳು. ಅವಳ ಮಕ್ಕಳಿಗೆ ಇಲ್ಲಿನ ಚೌಕಾಸಿ ವ್ಯಾಪಾರ ಗೊತ್ತಿಲ್ಲ. ನಾನು ಆಟೊಕ್ಕೆ, ಹಣ್ಣು, ತರಕಾರಿಗೆಲ್ಲಾ ಚೌಕಾಸಿ ಮಾಡೋದನ್ನು ನೋಡಿ ಅವರಿಗೆ ಅಲ್ಪಸ್ವಲ್ಪ ಪರಿಚಯ ಆಗಿತ್ತು. ಆವತ್ತು ಊಟಕ್ಕೆಂದು ಹೋಟೆಲ್‌ಗೆ ಹೋಗಿದ್ವಿ. ಊಟದ ನಂತರ ವೇಟರ್ ತಂದಿರಿಸಿದ್ದ ಬಿಲ್ಲನ್ನು ಎತ್ತಿ ನನ್ನ ಹಿರಿಯ ಮೊಮ್ಮಗಳು ನನ್ನ ಕೈಗೆ ಕೊಟ್ಟಳು. ಅವರ ಅವ್ವ, ಬಿಲ್ಲನ್ನು ಅಜ್ಜಿಯ ಕೈಗೆ ಯಾಕೆ ಕೊಟ್ಟೆ ಎಂದು ಬೈದಳು. ಅದಕ್ಕೆ ನನ್ನ ಮೊಮ್ಮಗಳ ಉತ್ತರ: 'ಅಜ್ಜೀ ವಿಲ್ ಬಾರ್ಗೇನ್!'

**ಮಾಲತಿ ಮುದಕವಿ**

ಕಲೆ: ಗಣೇಶ ಆಚಾರ್ಯ